ಅದಕ್ಕೆ ನನ್ನ ಸಹಕಾರ ಕೋರಿದ. ಚಿಪ್ಪಣ್ಣ ರಾ ಕಚೇರಿಯಲ್ಲಿ ಉದ್ಯೋಗಿ. ನಾನು ಸಣ್ಣ ಪುಟ್ಟ ಅಪರಾಧಗಳಲ್ಲಿ ತೊಡಗಿಸಿಕೊಂಡ ಅನುಭವಿ. ಆತನ ಕಚೇರಿಯಿಂದ ಮಹತ್ವಪೂರ್ಣವಾದ ದಾಖಲೆಯೊಂದನ್ನು ಅಪಹರಿಸುವುದು ಯೋಜನೆ. ಆತನ ಹೇಳಿಕೆಯಂತೆ, ತನ್ನ ಕಚೇರಿಯಿಂದ ದಾಖಲೆಯನ್ನು ತಂದು, ಯಾರಿಗೋ ತಲುಪಿಸುವುದಷ್ಟೇ ಆತನ ಕೆಲಸ. ಈ ವ್ಯವಹಾರದ ಹಿಂದೆ ಆತನ ಕಚೇರಿಯ ಉನ್ನತ ಉದ್ಯೋಗಿಯೊಬ್ಬರು ಇದ್ದಾರಂತೆ. ಅವರ ಹೆಸರು ಆತ ಹೇಳಿಲ್ಲ. ಚಿಪ್ಪಣ್ಣನಿಗೆ ಈ ಕೆಲಸಕ್ಕೆ ಒಂದಿಷ್ಟು ಮೊತ್ತ ಸಂದಾಯವಾಗುತ್ತಂತೆ. ಆದರೆ, ಆತನ ಮೇಲಧಿಕಾರಿ ಭಾರೀ ಹಣ ಪಡೆಯುತ್ತಾನಂತೆ. ಯಾರಿಗೆ ದಾಖಲೆಯನ್ನು ತಲುಪಿಸಬೇಕೋ, ಆ ವ್ಯಕ್ತಿಯ ಪರಿಚಯ ಚಿಪ್ಪಣ್ಣನಿಗೆ ಇಲ್ಲ. ಆತನ ಮೇಲಧಿಕಾರಿ ಅದಕ್ಕಾಗಿ ಒಂದು ಪ್ಲಾನ್ ಮಾಡಿದ್ದ. ಹೊಸ ಶೂ ಖರೀದಿಸಿ, ಅದರ ಹೀಲ್ಸ್‌ನಲ್ಲಿ ಸೂಕ್ಷ್ಮವಾಗಿ ರಂಧ್ರ ಕೊರೆದು, ಅದರೊಳಗೆ ದಾಖಲೆಯನ್ನು ಸ್ಟೋರ್ ಮಾಡಿದ ಚಿಪ್‌ಅನ್ನು ಅಡಗಿಸಿ, ಕಚೇರಿಯಿಂದ ತರುವುದು. ಅದಕ್ಕಾಗಿ ವಿಶೇಷ ಚಿಪ್‌ಅನ್ನು ಬಳಸಲಾಗುತ್ತದಂತೆ. ಅದು ಸೆಕ್ಯುರಿಟಿ ಚೆಕ್‌ನಲ್ಲೂ ಪತ್ತೆಯಾಗದಂತಹದ್ದು."

ಅರೆಕ್ಷಣ ಗಂಟಲು ಸರಿಪಡಿಸಿಕೊಂಡು, ಪಳನಿ ವಿವರಣೆಯನ್ನು ಮುಂದುವರೆಸಿದ,

"ಅದರ ಕಾರ್ಯವಿಧಾನವನ್ನೂ ಎಚ್ಚರಿಕೆಯಿಂದ ಆಯೋಜಿಸಲಾಗಿತ್ತು. ಚಿಪ್ಪಣ್ಣ ತನ್ನ ಮನೆಯ ಹೊರಗಡೆ ಆ ಶೂಗಳನ್ನು ಇಡಬೇಕಾಗಿತ್ತು. ಬಾದಾಮಿ ನಿಗದಿತ ಸಮಯಕ್ಕೆ ಬಂದು, ತನ್ನ ಚಪ್ಪಲಿಯನ್ನು ಬಿಟ್ಟು, ಆ ಹೊಸ ಶೂಗಳನ್ನು ಹಾಕಿಕೊಂಡು ಹೋಗುವುದೆಂದು ತೀರ್ಮಾನಿಸಲಾಗಿತ್ತು. ಆ ಹೊತ್ತಿಗೆ ಮನೆಯ ಬಾಗಿಲು ಹಾಕಿರಬೇಕು. ಚಿಪ್ಪಣ್ಣನನ್ನು ಭೇಟಿಯಾಗುವ ಸೋಗಿನಲ್ಲಿ ಬಂದ ಬಾದಾಮಿ, ತುಸು ಹೊತ್ತು ಕಾದು, ಹಿಂತಿರುಗಿ ಹೋಗುತ್ತಾನೆ. ಆವಾಗ ಶೂ ಬದಲಾಗಿರುತ್ತದೆ. ಚಿಪ್ಪಣ್ಣ ಮನೆಯ ಹೊರಗೆ ಬರಬಾರದು ಮತ್ತು ಎಲ್ಲಾ ಕಿಟಕಿಗಳ ಬಾಗಿಲು ಹಾಕಿರಬೇಕು ಎಂದು ನಿರ್ಧರಿಸಲಾಗಿತ್ತು. ಅದರ ಉದ್ದೇಶ, ಬಾದಾಮಿಯ ಗುರುತು ಚಿಪ್ಪಣ್ಣನಿಗೆ ಆಗಬಾರದು ಎನ್ನುವುದಷ್ಟೇ."

"ಚಿಪ್ಪಣ್ಣನಿಗೆ ಹಣ ಹೇಗೆ ತಲುಪಿಸಲಾಗುತ್ತದೆ?" ನಾನು ವಿಚಾರಿಸಿದೆ.

"ಅದನ್ನು ಆತನ ಮೇಲಧಿಕಾರಿಯೇ ನೀಡುತ್ತಾನಂತೆ. ಆದರೆ, ಕತೆಗೆ ಇಲ್ಲೊಂದು ತಿರುವು ಸಿಕ್ಕಿತು. ಚಿಪ್ಪಣ್ಣನಿಗೆ ಆ ಚಿಪ್‌ಅನ್ನು ಬಾದಾಮಿಯ ಕೈನಿಂದ ಎಗರಿಸಿ, ಬೇರೆ ಯಾರಿಗಾದರೂ ಮಾರಾಟ ಮಾಡುವ ಯೋಚನೆ ಬಂತು! ಚಿಪ್ಪಣ್ಣನಿಗೆ ಇದರಲ್ಲಿ ನಷ್ಟವೇನೂ ಇಲ್ಲ. ಮೋಸ ಮಾಡಿದ ಅಂತ ಸಿಕ್ಕಿಬೀಳುವುದು ಆತನ ಬಾಸ್. ಆದರೆ, ಹೇಗೆ ಬಾದಾಮಿಯಿಂದ ಅಪಹರಿಸುವುದು? ಆತ ನನ್ನ ಸಲಹೆ ಕೇಳಿದ. ಶೂನಲ್ಲಿ ಜಿಪಿಎಸ್ ಇಡುವಂತೆ ನಾನು ಆತನಿಗೆ ಸಲಹೆ ನೀಡಿದೆ! ಬಾದಾಮಿ ಶೂ ಹಾಕಿಕೊಂಡು ಹೋದ ತಕ್ಷಣ, ಜಿಪಿಎಸ್ ಟ್ರಾಕರ್ ಮೂಲಕ ಆತನನ್ನು ಹಿಂಬಾಲಿಸಿ, ಆತನ ಶೂ ಕದಿಯುವ ಯೋಜನೆ. ಇದಕ್ಕಾಗಿ ಜಿಪಿಎಸ್ ಟ್ರಾಕರನ್ನು ಬಳಸಲು ನಿಶ್ಚಯಿಸಲಾಯಿತು. ಆ ಶೂಗಳನ್ನು ಬಾದಾಮಿ ಹಾಕಿಕೊಂಡು ಹೋದ, ಕೆಲ ಕ್ಷಣಗಳಲ್ಲೇ ಆತನನ್ನು ಹಿಂಬಾಲಿಸಿ, ಶೂ ಲಪಟಾಯಿಸುವ ಸಂಚು. ನನ್ನ ಈ ಸಹಕಾರಕ್ಕೆ ಚಿಪ್ಪಣ್ಣ ನನ್ಗೆ ನೀಡಿದ್ದು ಜುಜುಬಿ ಮೊತ್ತ. ಆಗ ನಾನೇ ಆ ಜಿಪಿಎಸ್ ಟ್ರಾಕರನ್ನು ಚಿಪ್ಪಣ್ಣನಿಂದ ಎಗರಿಸಿ, ಬಾದಾಮಿಯಿಂದ ಶೂ ಪಡೆಯಲು ನಿರ್ಧರಿಸಿದೆ."

"ಅಲ್ಲಾ, ನಿನ್ಗೆ ನೇರವಾಗಿ ಆ ಶೂಗಳನ್ನು ಒಯ್ಯಬಹುದಿತ್ತಲ್ಲ?" ನಗುತ್ತಾ ಕರಮಚಂದ ಹೇಳಿದ.

"ಎರಡು ಕಾರಣಗಳಿಗಾಗಿ ನಾನು ಹಾಗೆ ಮಾಡಲಿಲ್ಲ. ಬಾದಾಮಿ ಯಾರ ಪರವಾಗಿ ಬಂದಿದ್ದಾನೆಂಬುದನ್ನು ಪತ್ತೆ ಹಚ್ಚಬೇಕಾಗಿತ್ತು. ಆಗ ಅದೇ ವ್ಯಕ್ತಿಗೆ ಈ ಚಿಪ್‌ಅನ್ನು ಮಾರಬಹುದಲ್ವೇ? ಬಾದಾಮಿಯಿಂದ ಹೇಗಾದರೂ ಫೋನು ಎಗರಿಸಿ, ಅಥವಾ ಅವನನ್ನು ಮುಗಿಸಿ, ಆ ವ್ಯಕ್ತಿಯನ್ನು ಪತ್ತೆ ಮಾಡುವ ಯೋಚನೆಯಿತ್ತು. ಇನ್ನೊಂದು ಕಾರಣ, ಚಿಪ್ಪಣ್ಣನ ಮೇಲಿದ್ದ ಕರುಣೆ. ಚಿಪ್ ಸಿಗದೇ